1. ಕಾಳಿನದಿ ಯೋಜನೆ (2ನೇ ಹಂತ)
2. ಘಟಪ್ರಭಾ ಯೋಜನೆ
3. ಮಲ್ಲಾಪುರ ಮತ್ತು 4 ಇತರ ಸಣ್ಣ ಜಲವಿದ್ಯುತ್ ಯೋಜನೆಗಳು.

ಶರಾವತಿ ಟೇಲ್‌ರೇಸ್, ಶಿವಪುರ ವಿದ್ಯುತ್‌ಗಾರ ಯೋಜನೆ ಹಾಗೂ ರಾಯಚೂರು ಉಷ್ಣ ವಿದ್ಯುತ್ ಯೋಜನೆ (2ನೇ ಹಂತ)ಗಳ ಯೋಜನಾ ವರದಿಗಳನ್ನು ತಯಾರಿಸಿ ಕೇಂದ್ರ ವಿದ್ಯುತ್ ಪ್ರಾಧಿಕಾರ ಹಾಗೂ ಯೋಜನಾ ಆಯೋಗದ ಅನುಮತಿಗಾಗಿ ಕಳುಹಿಸಲಾಗಿದೆ.

ಇ) ಹೌದು.

ದಕ್ಷಿಣ ವಲಯದ ವಿದ್ಯುಚ್ಛಕ್ತಿ ಮಂತ್ರಿಗಳ ಸಭೆಯಲ್ಲಿ, ಕೇಂದ್ರ ವಿದ್ಯುಚ್ಛಕ್ತಿ ರಾಜ್ಯ ಮಂತ್ರಿಗಳ ಮುಂದೆ ಈ ವಿಷಯವನ್ನು ಒತ್ತಾಯಿಸಲಾಯಿತು.

ರೈತರಿಂದ ಸಹಕಾರ ಸಂಘಗಳ ಸಾಲವನ್ನು ವಸೂಲು ಮಾಡುವುದು

ಪ್ರಶ್ನೆ : 35 (73) ಶ್ರೀ. ಪಂಪಾಪತಿ (ದಾವಣಗೆರೆ) .— ಮಾನ್ಯಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ : —

ಅ) ಸರಕಾರದವರು ಸಹಕಾರಿ ಸಂಸ್ಥೆಗೆ ಸಾಲ ಮರುಪಾವತಿ ಬಗ್ಗೆ ತೋರಿಸಿದ ರಿಯಾಯಿತಿ ದೆಸೆಯಿಂದ ಎಷ್ಟು ಹಣ ರೈತರಿಂದ ಮರುಪಾವತಿಯಾಗಿದೆ;

ಆ) ಈ ರಿಯಾಯಿತಿ ಉಪಯೋಗ ಪಡೆದ ಪರಿಣಾಮವಾಗಿ ಶ್ರೀಮಂತ ರೈತರಿಂದ ಮರು ಪಾವತಿಯಾದ ಮೊಬಲಗು ಎಷ್ಟು;

ಇ) ಸಣ್ಣ ರೈತರಿಂದ ಮರುಪಾವತಿಯಾದ ಮೊಬಲಗು ಎಷ್ಟು;

ಈ) ಸಾಲ ಮರುಪಾವತಿ ಮಾಡದಿರುವವರಿಗೆ ಮತ್ತೆ ಕಾಲಾವಕಾಶ ಕೊಡಲಾಗುವದೆ ?

ಉತ್ತರ : ಆರ್. ಎಲ್. ಜಾಲಪ್ಪ (ಸಹಕಾರ ಸಚಿವರು) .— ಅ) ಒಟ್ಟು ರೂ. 118.97 ಕೋಟಿಯಷ್ಟು ವಸೂಲಿಯಾಗಿದೆ.

ಆ) ರೂ. 72.16 ಕೋಟಿ.

ಇ) ಸಣ್ಣ ಮತ್ತು ಅತಿ ಸಣ್ಣ ರೈತರಿಂದ ಮರುಪಾವತಿಯಾದ ಮೊಬಲಗು ರೂ. 46.81 ಕೋಟಿಗಳು.

ಈ) ಇಲ್ಲ.

ರೈತರಿಗೆ ಬಡ್ಡಿ, ಸುಸ್ತಿ ಬಡ್ಡಿ ವಿನಾಯಿತಿ

ಪ್ರಶ್ನೆ : 36 (80) ಶ್ರೀ. ಜಿ. ಎಸ್ ಬಸವರಾಜ (ಅರಸಿಕೆರೆ).— ಮಾನ್ಯಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ರಾಜ್ಯದ ರೈತರಿಗೆ ಜೂನ್ 30ನೇ ತಾರೀಖಿನೊಳಗೆ ಸಾಲ ಮರುಪಾವತಿ ಮಾಡಿದವರಿಗೆ ಬಡ್ಡಿ ಸುಸ್ತಿ ಬಡ್ಡಿ ವಿನಾಯಿತಿ ಘೋಷಿಸಿರುವುದು ನಿಜವೆ ;

ಆ) ರಾಜ್ಯದ 16 ಜಿಲ್ಲೆಗಳು ಬರಗಾಲ ಪ್ರದೇಶವೆಂದು ಸರ್ಕಾರ ಘೋಷಿಸಿರುವುದು ನಿಜವೇ ;

ಇ) ಹಾಗಿದ್ದಲ್ಲಿ ಜೂನ್ 30ನೇ ತಾರೀಖು ಸಾಲ ವಾಪಸಾತಿಗೆ ಗಡುವು ಮಾಡಿರುವುದರಿಂದ ರೈತರಿಗೆ ತೊಂದರೆಯಾಗಿದೆಯಿಲ್ಲವೇ ?

ಉತರ : ಆರ್. ಎಲ್. ಜಾಲಪ್ಪ : (ಸಹಕಾರ ಸಚಿವರು) .—ಅ) ಹೌದು 1) 30-6-1982 ರಂದು ಸುಸ್ತಿದಾರ ರಾಗಿದ್ದು 30-6-83ರ ಒಳಗೆ ಸಾಲ ತೀರಿಸಿದವರಿಗೆ 30-6-82ರ ಸುಸ್ತಿ ಸಾಲದ ಮೇಲಿನ ಪೂರ್ಣ ಬಡ್ಡಿ, ಸುಸ್ತಿ ಬಡ್ಡಿಯನ್ನು ಸರಕಾರ ರೈತರ ಪರವಾಗಿ ತುಂಬುತ್ತಿದೆ. ಆದ್ದರಿಂದ ರೈತರ ಬಗ್ಗೆ ಹೇಳುವುದಾದರೆ 30-6-82 ರಂದಿದ್ದ ಸುಸ್ತಿ ಸಾಲದ ಹಣ 30-6-83ರ ಒಳಗೆ ಪೂರ್ತಿ ಪಾವತಿ ಮಾಡಿದ್ದಲ್ಲಿ ಆ ಸಾಲದ ಮೇಲಿನ ಬಡ್ಡಿಯನ್ನು ರೈತರು ಕೊಡಬೇಕಾದ್ದಿಲ್ಲ.

2) ಚಾಲ್ತಿ ಸಾಲವನ್ನು 30-6-83ರ ಒಳಗೆ ಕಟ್ಟಿದವರಿಗೆ ಶೇ. 5 ರಿಂದ 5 1/2 ಯಷ್ಟು ಬಡ್ಡಿ ರಿಯಾಯಿತಿಯನ್ನು ಕೊಡಲಾಗಿದೆ. ಆ ರಿಯಾಯಿತಿ ಹಣವನ್ನು ಸರಕಾರ ಸಬ್ಸಿಡಿ ರೂಪದಲ್ಲಿ ತುಂಬುತ್ತಿದೆ.

ಆ) 16 ಜಿಲ್ಲೆಗಳಲ್ಲಿ ಅಭಾವ ಪೀಡಿತ ಪರಿಸ್ಥಿತಿ ಇದೆಯೆಂದು ಸರ್ಕಾರ ಪರಿಗಣಿಸಿದೆ.

ಇ) ಇಲ್ಲ. ಏಕೆಂದರೆ ಸಹಕಾರಿ ಸಾಲಗಳನ್ನು ಅವಶ್ಯವಿದ್ದೆಡೆಗಳಲ್ಲಿ ಪರಿವರ್ತಿಸಲು ಅಥವಾ ಕಂತುಗಳ ಪುನರ್ನಿಗದಿ ಮಾಡಲು ಅವಕಾಶ ಮಾಡಿಕೊಡಲಾಗಿದೆ.

ರಾಜ್ಯದಲ್ಲಿ ಸಹಕಾರ ಸಂಘಗಳಿಂದ ರೈತರು ಪಡೆದ ಸಾಲ

ಪ್ರಶ್ನೆ : 37 (19) ಶ್ರೀ. ಕೆ. ಹೆಚ್ ಕುರದಗಿ : (ಮುಂಡರಗಿ) .—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ರಾಜ್ಯದಲ್ಲಿ ಸಹಕಾರಿ ಸಂಘ ಸಂಸ್ಥೆಗಳಿಂದ ರೈತರು ಪಡೆದ ಸಾಲದ ಮೇಲೆ ಬಡ್ಡಿ ವಜಾ